# ನಿಮ್ಮೊಡನೆ

## ಎತ್ತ ಸಾಗುತ್ತಿದೆ ಬೆಂಗಳೂರು?

'ಜೀವನವೇ ಬೇಸರವಾಗಿದೆ' ಎಂದು ಚೀಟಿ ಬರೆದಿಟ್ಟು 23ರ ಹರೆಯದ ಎಂಬಿಎ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಳ್ಳುವುದು, 'ಫ್ಲಾಟ್ ಖರೀದಿಸಲು ತವರಿನಿಂದ 5 ಲಕ್ಷ ರೂಪಾಯಿ ತಾ' ಎಂದು ಒತ್ತಾಯಿಸಿದ ಗಂಡನ ಧೋರಣೆಯಿಂದ ಮನನೊಂದು ಗೃಹಿಣಿ ಆತ್ಮಹತ್ಯೆ ಮಾಡಿಕೊಳ್ಳುವುದು– ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳು ಎಷ್ಟು ಒತ್ತಡದಲ್ಲಿ ಬದುಕುತ್ತಿದ್ದಾರೆ ಎನ್ನುವುದನ್ನು ಸೂಚಿಸುತ್ತವೆ.



ಅಭಿಜಿತ್ ಜೆ.ಕೆ

ಬೆಂಗಳೂರು ನಗರವನ್ನು ಈಗಾಗಲೆ ಸಮಾಜ ವಿಜ್ಞಾನಿಗಳು 'ಆತ್ಮಹತ್ಯೆಗಳ ರಾಜಧಾನಿ' ಎಂದು ಗುರುತಿಸಿಯಾಗಿದೆ. ಅದಕ್ಕೆ ತಕ್ಕಂತೆ ಬೆಂಗಳೂರಿನಲ್ಲಿ ಆತ್ಮಹತ್ಯೆಯ ಪ್ರಕರಣಗಳು ಏರುತ್ತಲೇ ಇವೆ. ಅದರಲ್ಲೂ 20–35 ವಯಸ್ಸಿನ ನಡುವಣ ಯುವಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಪದೇ ಪದೇ ನಡೆದಿದೆ. ಕಳೆದ ವಾರವಂತೂ ಒಂದೇ ದಿನ ಆರು ಯುವಜನರ ಆತ್ಮಹತ್ಯೆಗಳು ವರದಿಯಾಗಿವೆ! ಈ ಮಧ್ಯೆ ಯುವ ದಂಪತಿಗಳ ನಡುವಣ ವೈಮನಸ್ಸಿನ ಕಾರಣ ಪರಸ್ಪರ ಕೊಲೆಗಳೂ ನಡೆಯುತ್ತಿವೆ. ಅದರಲ್ಲೂ ಪತಿ– ಪತ್ನಿ ಇಬ್ಬರೂ ಉನ್ನತ ವಿದ್ಯಾಭ್ಯಾಸ ಹೊಂದಿ, ಕೈತುಂಬ ಸಂಬಳದ ಹುದ್ದೆಗಳಲ್ಲಿ ದುಡಿಯುತ್ತಿರುವ ಸಂಸಾರಗಳಲ್ಲಿ ಇಂತಹ ಕೊಲೆ ಪ್ರಕರಣಗಳು ಹೆಚ್ಚಾಗಿ ನಡೆಯುವುದು ವಿಪರ್ಯಾಸದ ಸಂಗತಿ.

ಈ ಕೊಲೆ, ಆತ್ಮಹತ್ಯೆಗಳಿಗೆ ಕಾರಣಗಳಂತೂ ತೀರಾ ಕ್ಷುಲ್ಲಕ. ಹೊಸ ಫ್ಲಾಟ್ ಖರೀದಿಸಲು ತಾನು ಪಡೆಯಲಿರುವ ಬ್ಯಾಂಕ್ ಸಾಲಕ್ಕೆ ಪತ್ನಿ ಜಂಟಿಯಾಗಿ ಸಹಿ ಹಾಕಲಿಲ್ಲ ಎನ್ನುವ ಕಾರಣಕ್ಕಾಗಿ ಪತಿ ಮಹಾಶಯನೊಬ್ಬ ಪತ್ನಿಯನ್ನು ಚಾಕುವಿನಿಂದ ಇರಿದು ಕೊಂದಿದ್ದಾನೆ. ಚಾಕುವನ್ನು ದೆಹಲಿಯಲ್ಲೇ ಖರೀದಿಸಿ, ಅಲ್ಲಿಂದ ಬೆಂಗಳೂರಿಗೆ ವಿಮಾನದಲ್ಲಿ ಬಂದು, ತಾಯಿಯ ಮನೆಯಲ್ಲಿ ವಾಸವಾಗಿದ್ದ ಹೆಂಡತಿಯನ್ನು ಇರಿದು ಕೊಂದಿರುವುದು ಏನನ್ನು ಸೂಚಿಸುತ್ತದೆ? ವ್ಯಕ್ತಿಯೊಬ್ಬನ ಸಿಟ್ಟು ಹೀಗೆ ದ್ವೇಷವಾಗಿ ಪರಿವರ್ತನೆಯಾಗುವುದಾದರೆ ಪತಿ– ಪತ್ನಿ ಸಂಬಂಧಗಳಿಗೆ ಅರ್ಥವಾದರೂ ಏನು? ಇನ್ನೊಂದು ಪ್ರಕರಣದಲ್ಲಿ ತನಗೆ ನಿಶ್ಚಿತಾರ್ಥವಾದ ಯುವಕನನ್ನು ಮದುವೆ ಮಾಡಿಕೊಳ್ಳಲು ಇಷ್ಟವಿಲ್ಲದ ಯುವತಿಯೊಬ್ಬಳು, ಪ್ರಿಯತಮನ ಜತೆ ಸೇರಿ ಸಂಚು ಹೂಡಿ, ವಿಷ ಕುಡಿಸಿ ಕೊಲೆ ಮಾಡಿದ್ದಾಳೆ. 'ತನಗೆ ಮದುವೆ ನಿಶ್ಚಯವಾದ ಯುವಕ ಇನ್ನೊಬ್ಬ ಹುಡುಗಿಯ ಜತೆ ಸಂಬಂಧ ಇಟ್ಟುಕೊಂಡಿದ್ದಾನೆ ಎಂಬುದು ಗೊತ್ತಾಗಿ ಪ್ರತೀಕಾರದಿಂದ ಈ ಕೊಲೆ ಮಾಡಿದ್ದೇನೆ' ಎಂದು ಯುವತಿ ಪೊಲೀಸರಿಗೆ ಹೇಳಿಕೆ ನೀಡಿದ್ದಾಳೆ. ಮದುವೆ ಇಷ್ಟವಿಲ್ಲ ಎಂದರೆ ಆ ನಿಶ್ಚಿತಾರ್ಥವನ್ನು ರದ್ದು ಮಾಡಿದರೆ ಸಾಕಿತ್ತು. ಅದಕ್ಕಾಗಿ ಆತನನ್ನೂ ಕೊಲೆ ಮಾಡಿ, ತಾನೂ ಜೈಲು ಪಾಲಾಗುವಂತಹ ಮೂರ್ಖತನದ ಕೆಲಸ ಮಾಡಬೇಕಿತ್ತೆ? ವಿದ್ಯಾವಂತ ಯುವಜನರಲ್ಲಿ ಸಣ್ಣ ವಿವೇಚನಾ ಶಕ್ತಿಯೂ ಇಲ್ಲವಾಗುತ್ತಿದೆಯೆ?

ಮತ್ತೊಂದು ಪ್ರಕರಣದಲ್ಲಿ ಪ್ರೀತಿಸಿ ಮದುವೆಯಾದ 12 ವರ್ಷಗಳ ಬಳಿಕ, ಅದೂ ಮೂರು ಮಕ್ಕಳನ್ನು ಹೊಂದಿರುವ ವ್ಯಕ್ತಿ, ದುಡಿಯುವ ಪತ್ನಿಯ ನೈತಿಕತೆ ಶಂಕಿಸಿ ಕೊಲೆ ಮಾಡಿದ್ದಾನೆ. 12 ವರ್ಷಗಳ ಕಾಲ ಒಟ್ಟಿಗೇ ವಾಸಿಸಿದ್ದೂ ಪರಸ್ಪರರನ್ನು ಅರ್ಥ ಮಾಡಿಕೊಳ್ಳಲು, ಗೌರವಿಸಲು ಸಾಧ್ಯವಾಗಿಲ್ಲವೆಂದರೆ ಏನರ್ಥ? 'ಜೀವನವೇ ಬೇಸರವಾಗಿದೆ' ಎಂದು ಚೀಟಿ ಬರೆದಿಟ್ಟು 23ರ ಹರೆಯದ ಎಂಬಿಎ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಳ್ಳುವುದು, 'ಫ್ಲಾಟ್ ಖರೀದಿಸಲು ತವರಿನಿಂದ 5 ಲಕ್ಷ ತಾ' ಎಂದು ಒತ್ತಾಯಿಸಿದ ಗಂಡನ ಧೋರಣೆಯಿಂದ ಮನನೊಂದು ಗೃಹಿಣಿ ಆತ್ಮಹತ್ಯೆ ಮಾಡಿಕೊಳ್ಳುವುದು– ಹೀಗೆ ಆತ್ಮಹತ್ಯೆ ಕಾರಣಗಳು ಕೂಡಾ ಸಮಾಜದಲ್ಲಿ ಹೆಣ್ಣುಮಕ್ಕಳು ಎಷ್ಟು ಒತ್ತಡದಲ್ಲಿ ಬದುಕುತ್ತಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ.

ನಗರೀಕರಣ ಯುವಜನರ ಮೇಲೆ ಭರಿಸಲಾಗದ ಒತ್ತಡವನ್ನು ಹೇರುತ್ತಿದೆ. ಒಂದೇ ಸಮನೆ ಹಗಲು ರಾತ್ರಿ ದುಡಿಯುವ ಒತ್ತಡದಲ್ಲಿ ಸಂಸಾರ ಸೌಖ್ಯವನ್ನು ಕಾಪಾಡಿಕೊಳ್ಳಲು ಆಗುತ್ತಿಲ್ಲ ಎನ್ನುತ್ತಾರೆ ಮನೋವಿಜ್ಞಾನಿಗಳು. ಹಿಂದೆಲ್ಲ ದುಡಿಮೆಯ ಅವಕಾಶಗಳು ಕಡಿಮೆ ಇದ್ದವು, ಸಂಪಾದನೆಯೂ ಕಡಿಮೆ ಇತ್ತು. ಆದರೆ ಜನ ಇಷ್ಟೊಂದು ಪ್ರಮಾಣದಲ್ಲಿ ನೆಮ್ಮದಿ ಕೆಡಿಸಿಕೊಂಡಿರಲಿಲ್ಲ. ಆದರೆ ಇವತ್ತು ಜಾಗತೀಕರಣದ ಬಾಗಿಲು ತೆರೆದ ಬಳಿಕ ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಕೈ ತುಂಬ ಸಂಪಾದನೆಯೂ ಆಗುತ್ತಿದೆ. ಹಣ ಹೆಚ್ಚಾದಂತೆ ಬಯಕೆಯ ಪಟ್ಟಿಗಳೂ ಏರುತ್ತವೆ. ಈ ಬಯಕೆಗಳ ಬೆನ್ನು ಹತ್ತುವ ಯುವಜನತೆ ಬದುಕಿನ ಶೈಲಿಯ ಮೇಲೆ ಹತೋಟಿ ಇಟ್ಟುಕೊಳ್ಳಲು ವಿಫಲರಾಗುತ್ತಿದ್ದಾರೆ. ಪರಿಣಾಮವಾಗಿ ನಿರಾಶೆ, ಹತಾಶೆ. ದುಃಖ ಜೀವನದುದ್ದಕ್ಕೂ ಜತೆಯಾಗಿ ಸಾಗಿ ಬರುತ್ತಿವೆ. 'ಐಹಿಕ ಭೋಗಭಾಗ್ಯಗಳೇ ಎಲ್ಲವೂ ಅಲ್ಲ' ಎನ್ನುವುದಾಗಲೀ, 'ನೆಮ್ಮದಿ ದೊರಕುವುದು ಕೇವಲ ಹಣದಿಂದ ಅಲ್ಲ' ಎನ್ನುವುದಾಗಲೀ ನಮ್ಮ ಯುವಜನರಿಗೆ ಅರ್ಥವಾಗುತ್ತಿಲ್ಲ. ಗಳಿಕೆಗಾಗಿ ನಿರಂತರ ದುಡಿಮೆ, ಗಳಿಸಿದ ಹಣವನ್ನು ದುಪ್ಪಟ್ಟು ಮಾಡುವುದಕ್ಕಾಗಿ ಅಧಿಕ ಮಾನಸಿಕ ಒತ್ತಡ, ಅದರಿಂದ ಬಿಡುಗಡೆ ಹೊಂದಲು ಇನ್ನಷ್ಟು ಸುಖದ ದಾರಿ ಹುಡುಕುವುದು– ಸಾವಿರಾರು ಯುವಜನರಿಗೆ ಇದೇ ಬದುಕಾಗಿದೆ! ನಗರದ ನಾಗರಿಕರಿಗೆ ಆರೋಗ್ಯವಂತ ಹಾಗೂ ನೆಮ್ಮದಿಯ ಬದುಕು ರೂಪಿಸಲು ಬೇಕಾದ ಪರಿಸರವನ್ನು ಸೃಷ್ಟಿ ಮಾಡುವ ಹೊಣೆ ಸರಕಾರ ಮಾತ್ರವಲ್ಲ ಸಮಾಜದ ಮೇಲೂ ಇದೆ.

■ ಬಿ.ಎಂ.ಹನೀಫ್